ನನ್ನ ಬಳಿ ಆ ರೀತಿ ನಡ್ಕೊಂಡ. ನಾನು ಸ್ನಾನ ಮಾಡುವಾಗ ಮೊಬೈಲ್ ಕ್ಯಾಮರದಲ್ಲಿ ವಿಡಿಯೊ ಮಾಡಿ, 'ನೀನು ಸಹಕರಿಸ್ಲಿಲ್ಲಾಂದ್ರೆ ಫೇಸ್‌ಬುಕ್‌ನಲ್ಲಿ ಹಾಕ್ತೀನಿ. ನಂಗೆ ನಾಲ್ಕು ಸಾವಿರ ಜನ ಫ್ರೆಂಡ್ಸ್ ಇದ್ದಾರೆ. ಆ ನಾಲ್ಕು ಸಾವಿರಕ್ಕೂ ನಾಲ್ಕು ಸಾವಿರ. ಒಂದು ಗ್ರೂಪ್‌ನಲ್ಲಿ ಲಕ್ಷಾಂತರ ಜನ ಇದ್ದಾರೆ. ಯೋಚ್ನೆ ಮಾಡು' ಎಂದು ಬ್ಲಾಕ್‌ಮೇಲ್ ಮಾಡುವುದರ ಜೊತೆಗೆ, 'ನೋಡೆ ಚಿನ್ನು ನಾನು ನೀನು ಜನರ ಕಣ್ಣಿಗೆ ಅಣ್ಣತಂಗಿ. ಈ ಮನೆಯೊಳ್ಗೆ ನಾವೇನು ಮಾಡುದ್ರು ಯಾರ್ಗೂ ಅನುಮಾನ ಬರಲ್ಲ. ಹೆಚ್ಚುಕಮ್ಮಿ ಆಗದೆ ಇರೋ ತರ ಎಚ್ಚರಿಕೆ ತಗೊಂಡ್ರೆ ಆಯ್ತಪ್ಪ. ನೀನ್ಯಾಕೆ ಹೆದ್ರುಕೊಳ್ತಿ' ಎಂದು ಸಲಹೆ ಕೊಟ್ಟ. ಇನ್ನೂ ಇಪ್ಪತ್ತು ವರ್ಷ ಮುಗಿದಿರದ ನನಗೆ ಆಗ ಏನು ಮಾಡಬೇಕೆಂದು ತಿಳಿಯಲಿಲ್ಲ. ಬೆತ್ತಲ ವಿಡಿಯೊ ಪ್ರಪಂಚದಲ್ಲಿ ಅನಾವರಣವಾಗುವುದಕ್ಕಿಂತ ಅಣ್ಣನೊಂದಿಗೆ ಹಾಸಿಗೆ ಹಂಚಿಕೊಳ್ಳುವುದು ಘೋರವಾಗಿತ್ತು. ಆದ್ರೆ ವಿಧಿಯೇ ಇರ್ಲಿಲ್ಲ. ಅವನ ಇಬ್ಬರು ತಂಗಿಯರ ಮದುವೆಯಾಗುವ ತನಕ ಅವನು ಮದ್ವೆಯಾಗುವಂತಿರಲಿಲ್ಲ. ಮನೆಯಲ್ಲಿರುವ ಜವಾಬ್ದಾರಿಗಳ ಅರಿವು ದೇಹಕ್ಕಿರಲಿಲ್ಲ. ಅದಕ್ಕೆ ಹೆಣ್ಣುಬೇಕಿತ್ತು. ಅದು ತಂಗಿಯಾದರೂ ಸರಿ. ಆ ದೇಹಕ್ಕೆ ಹೆಣ್ಣಿನೊಂದಿಗೆ ಸುಖಿಸಬೇಕಿತ್ತು" ಎಂದವಳ ಮುಖ ನೋಡುವ ಧೈರ್ಯ ನನಗಿರಲಿಲ್ಲ.

"ಈ ಗಂಡು ನೋಡಿ ಎಂಥ ಚಾಲಾಕಿ. ತನ್ನ ಮನೆಯ ಹೆಣ್ಣು ಸುರಕ್ಷಿತವಾಗಿರಬೇಕು ಅಂತಾನೆ. ಬೇರೆ ಮನೆಯ ಹೆಣ್ಣಿನ ಬಳಿ ತಾನು ಸರಿಯಾಗಿ ನಡ್ಕೊಳಲ್ಲ. ತನ್ನ ಹೆಂಡ್ತಿಗೆ ಮಾತ್ರ ಪತಿವ್ರತಾ ಧರ್ಮ ಬೋಧಿಸ್ತಾನೆ. ಅದೇ ಪಕ್ಕದ ಮನೆಯವಳು ತನಗೆ ಬೇಕು ಅಂತಾನೆ. ಪಕ್ಕದ ಮನೆಯವನು ಅರಸಿಕನಲ್ಲ ಎನ್ನುವ ಸತ್ಯ ಅವನಿಗೆ ಗೊತ್ತೇ ಇರಲ್ಲ. ಮಾತಿಗೆ ಮುಂಚೆ 'ನಿನ್ನಮ್ಮ' ಅಂತಾನೆ. ಬೇರೆಯವನು ಇವನಮ್ಮನ ಬಗ್ಗೆ ಅಂದ್ರೆ ಕೋಪ ಮಾಡ್ಕೊತಾನೆ. ಇವನಿಗೆ ಹೇಗೆ ಹೆಣ್ಣು ಅಮ್ಮ, ಅಕ್ಕತಂಗಿ, ಹೆಂಡ್ತಿ ಇಲ್ಲ ಮಗಳಾಗಿರ್ತಾಳೋ, ಹಾಗೆ ಬೇರೆ ಹೆಣ್ಣು ಇನ್ನೊಬ್ಬನಿಗೆ ಅದೆಲ್ಲ ಆಗಿರ್ತಾಳಲ್ವಾ? ಅದ್ನ ಯಾಕೆ ಅರ್ಥ ಮಾಡ್ಕೊಳಲ್ಲ? ತಾನು ಹೀಗೆ ಅತ್ಯಾಚಾರ ಮಾಡುತ್ತಿರುವ ಹೆಣ್ಣು ಬೇರೆಯವನ ತಾಯಿ, ಅಕ್ಕತಂಗಿ, ಹೆಂಡತಿ ಅಥವಾ ಮಗ್ಳಾಗಿರ್ತಾಳೆ ಅಂತ ಯಾಕನ್ನಿಸಲ್ಲ?" ಎಂದು ಪ್ರಶ್ನಾರ್ಥಕವಾಗಿ ನನ್ನತ್ತ ನೋಡಿ ಮಾತು ಮುಂದುವರಿಸಿದಳು. "ಇನ್ನೊಂದು ಗೊತ್ತಾರಿ ನಿಮ್ಗೆ... ತಾನು ತಿಂದು ಮುಗಿಸಿದ ಮೇಲೆ ಬೇರೆಯವರಿಗೂ ಹಂಚುವ ಗುಣ, ಇಲ್ಲಾ ಒಟ್ಟೊಟ್ಟಿಗೆ ಹಂಚಿಕೊಂಡು ತಿನ್ನುವ ಗುಣ ಅವ್ನಿಗಿರುತ್ತೆ. ಹೆಣ್ಣು ಅಂತಹವನ ಪಾಲಿಗೆ ಊಟ ತುಂಬಿಟ್ಟ ತಟ್ಟೆಯಂತೆ. ಅವನ ಹಸಿವು ನೀಗುವ ತನಕ ತಿಂದುಮುಗಿಸಿ, ನಂತರ ಬೇರೆಯವನನ್ನು ಕರೆದು ಇಲ್ಲಿ ತಟ್ಟೆಯಲ್ಲಿ ಊಟ ಇದೆ ಬಂದು ತಿನ್ನು ಎಂದು ತೋರಿಸಿ ಎದ್ದು ಹೋಗ್ತಾನೆ" ಎಂದವಳ ಮಾತಿನ ತಳಬುಡ ನನಗರ್ಥವಾಗಲಿಲ್ಲ.

"ಆ ಒಂದು ವಿಡಿಯೊ ಇಟ್ಕೊಂಡು ಎರಡು ವರ್ಷಕ್ಕಿಂತ ಜಾಸ್ತಿ ದಿನ ನನ್ನ ಹೆದ್ರಿಸಿ, ಅಧಿಕಾರದಿಂದ ನನ್ನ ದೇಹವನ್ನು ಹಿಂಡಿಹಿಪ್ಪೆ ಮಾಡಿದ್ದ ಅಣ್ಣ, ಇದ್ದಕ್ಕಿದ್ದಂತೆ ನಯವಾಗಿ ರಮಿಸತೊಡಗಿದಾಗ ನನಗೆ ಅಚ್ಚರಿಯಾಗಿತ್ತು. ಸ್ವಲ್ಪ ಕೊಸರಿಕೊಂಡರೂ ಮುಖದ ಮುಂದೆ ಫೋನ್ ಹಿಡಿಯುತ್ತಿದ್ದವನು ಈಗೇಕೆ ಬದಲಾದ ಎಂದು. "ಚಿನ್ನು ನೀನು ದೊಡ್ಮನಸ್ಸು ಮಾಡುದ್ರೆ ನಾನು ಫ್ಲೋರ್ ಇನ್‌ಚಾರ್ಜ್ ಆಗಬಹುದು" ಎಂದು ಬೆಣ್ಣೆ ಸವರಿದಾಗಲೇ ಅದರ ವಾಸನೆ ಮೂಗಿಗೆ ಬಡಿಯಿತಾದರೂ, ಅವನ ಮುಂದಿನ ಮಾತನ್ನು ಕೇಳಲು ಮೌನಿಯಾದೆ. "ಬರಿ ನಂಗ್ಮಾತ್ರ ಅಲ್ಲ, ನಿಂಗು ಬೆನಿಫಿಟ್ಸ್ ಇದೆ. ಡ್ರೆಸ್ ಜುವೆಲರಿ ಎಲ್ಲ ಸಿಗುತ್ತೆ. ಆಮೇಲೆ ನಿನ್ನ ಫ್ಯೂಚರ್ಗೂ ಸ್ವಲ್ಪ ದುಡ್ಡು ಸಿಗುತ್ತೆ. ಟೆನ್‌ಶನ್ ಇಲ್ದೆ ನೀನು ಲೈಫ್‌ನಲ್ಲಿ ಸೆಟ್ಲಾಗಬಹುದು. ನಾನು ನನ್ತಂಗಿನಾ ಮದ್ವೆ ಮಾಡ್ಬಹುದು. ನಿಂಗೆ ಗೊತ್ತಲ್ಲ, ಚಿಕ್ಕವ್ಳಿಗೆ ಬಿ.ಇ ಮಾಡ್ಬೇಕೂ ಅಂತ ತುಂಬಾ ಆಸೆ. ನೀನು ಮನಸ್ಸು ಮಾಡ್ಬೇಕಷ್ಟೆ. ನೀನು ಮನಸ್‌ಮಾಡುದ್ರೆ